ಓ.ಎಸ್.131/2019 **ಪಿ.ಡಬ್ಲೂಃ 1**

ಸಾಕ್ಷಿಯನ್ನು ದಿಃ **12.04.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಎಸ್.ಜಿ ವಕೀಲ**ರಿಂದ**

ಈ ದಾವೆಯನ್ನು ಹೂಡಲು ನಮ್ಮ ವಕೀಲರಿಗೆ ನಾನು ಮತ್ತು ಇತರೆ ವಾದಿಯರು ಸೇರಿ ನೀಡಿದ್ದೇವು. ನಾನು ಈ ಸಾಕ್ಷಿಯನ್ನು ಎಲ್ಲಾ ವಾದಿಯರ ಪರವಾಗಿ ನುಡಿಯುತ್ತಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆಯನ್ನು 3 ಜನ ವಾದಿಯರ ಪರವಾಗಿ ನುಡಿಯುತ್ತಿದ್ದೇನೆ ಎಂದು ಬರೆಸಿದ್ದೇನೆ. ದಾವಾ ಆಸ್ತಿಯು ಹರಾಜಿನಲ್ಲಿ ನಮ್ಮ ಹೆಸರಿಗೆ ಅಂದರೆ ನಮ್ಮ ತಂದೆ–ತಾಯಿ, ಹಾಗೂ ನಾವು 3 ಜನ ವಾದಿಯರ ಹೆಸರಿಗೆ 1983 ರಲ್ಲಿ ಆಗಿತ್ತು. 1983 ರಲ್ಲಿ ನಾನು ಹಾಗೂ ಉಳಿದ ವಾದಿಗಳು ಅಪ್ರಾಪ್ತ ವಯಸ್ಕರಾಗಿದ್ದೇವು ಎಂದರೆ ಸರಿ. ಈ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಅದೆ ಅರ್ಥದಲ್ಲಿ ನಾವು ವಾದ ಪತ್ರವನ್ನು ಬರೆಸಿದ್ದೇವೆ. ನಾನು ಹೇಳಿರುವ ಅರ್ಥದಲ್ಲಿ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಯಾರ ಹೆಸರಿಗೆ, ಎಷ್ಟು ಮೊತ್ತಕ್ಕೆ,ಯಾವಾಗ ಆಕ್ಷನ್ ಆಯಿತು ಎಂದು ಬರೆಸಿಲ್ಲ ಎಂದರೆ ಅದೆ ಅರ್ಥದಲ್ಲಿ ಬರೆಸಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. 1983 ರಲ್ಲಿ ನಮಗೆ ಆಕ್ಷನ್ ಆಯಿತು ಎಂದು ಹೇಳಿದ್ದು ಅಲ್ಲಿಂದ 2010 ರ ವರೆಗೆ ನಾವು ಏಕೆ ಸದರಿ ಸ್ವತ್ತನ್ನು ನಮ್ಮ ಹೆಸರಿನ ಮಾಲೀಕತ್ವಕ್ಕೆ ದಾಖಲೆ ಮಾಡಿಕೊಳ್ಳಲಿಲ್ಲ ಎಂದರೆ ನಮ್ಮ ತಂದೆ ತಾಯಿ ಬದುಕಿದ್ದ ಕಾರಣ ನಾವು ಅದರ ಬಗ್ಗೆ ಪ್ರಶ್ನೆ ಮಾಡಲಿಲ್ಲ ಎನ್ನುತ್ತಾರೆ. ದಿಃ 28.07.2010 ರಲ್ಲಿ ಪುರಸಭಾ ಮುಖ್ಯಾಧಿಕಾರಿ ನಮ್ಮಗಳ ಹೆಸರಿಗೆ ಕ್ರಯ ಪತ್ರಗಳು ಬರೆದುಕೊಟ್ಟರು ಎಂದು ನಾವು ಹೇಳಿದ್ದು, ಆ ಸಮಯದವರೆಗೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾವು ಇರಲಿಲ್ಲ ಎಂದರೆ ಸರಿಯಲ್ಲ. ದಿಃ 28.07.2010 ಕ್ಕೂ ಹಿಂದೆ ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದೆವು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಆಕ್ಷನ್ ರಶೀದಿ ಹಾಜರುಪಡಿಸಿದ್ದೇವೆ ಅದನ್ನು ಹೊರತುಪಡಿಸಿ ಬೇರೆ ದಾಖಲೆ ಹಾಜರುಪಡಿಸಿಲ್ಲ ಎನ್ನುತ್ತಾರೆ.

ನಿಪಿ. 1 ರ 1 ನೇ ಪುಟದ ಕೊನೆಯ ಸಾಲಿನಲ್ಲಿ ಸದರಿ ದಾಖಲೆ ಬರೆದುಕೊಟ್ಟಿರುವ ಪುರಸಭೆ ಮುಖ್ಯಾಧಿಕಾರಿಗಳು "ಷೆಡ್ಯೂಲ್ ನಲ್ಲಿ ನಮೂದಿಸಿರುವ ಖಾಲಿ ನಿವೇಶನಗಳನ್ನು ಆ ದಿನವೆ ನಿಮ್ಮ ತಂದೆಯವರ ಸ್ವಾಧೀನಕ್ಕೆ ವಹಿಸಿಕೊಟ್ಟಿರುವುದರಿಂದ" ಎಂದು ನಮೂದಿಲಾಗಿದೆ ಎಂದರೆ ಸರಿ. ಆ ದಿನವೆ ಎಂದು ಕಾಣಿಸಿರುವ ಬಗ್ಗೆ ಅದು ಯಾವ ದಿನ ಎಂದು ನಿಪಿ. 1 ರ ದಾಖಲೆಯಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ದಿಃ 03.03.1983 ಎಂಬ ಬರೆದಿರುವ ದಿನಕ್ಕೆ ಆ ದಿನವೆ ಎಂದು ಕಾಣಿಸಿದ್ದಾರೆ ಎನ್ನುತ್ತಾರೆ. ದಿಃ 28.07.2010 ರ ವರೆಗೂ ನಮಗೆ ದಾವಾ ಸ್ವತ್ತಿನ ಮಾಲಿಕತ್ವದ ದಾಖಲೆ ದೊರೆತಿರಲಿಲ್ಲ ಎಂದರೆ ಸರಿ, ನಮಗೆ ಹಣಕಾಸಿನ ಅನುಕೂಲ ಇರಲಿಲ್ಲ ಎನ್ನುತ್ತಾರೆ. ನಿಪಿ. 1 ರ ದಾಖಲೆ ನಮ್ಮ ಹೆಸರಿಗೆ ಕೊಡುವ ವರೆಗೂ ನಮಗೆ ದಾವಾ ಸ್ವತ್ತಿನ ಮೇಲೆ ಯಾವುದೆ ಹಕ್ಕು, ಅಧಿಕಾರ, ಮಾಲಿಕತ್ವದ ದಾಖಲೆ ಇರಲಿಲ್ಲ ಎಂದರೆ ಸರಿ, ಆಕ್ಷನ್ ರಶೀದಿ ಒಂದು ಮಾತ್ರ ಇತ್ತು ಎನ್ನುತ್ತಾರೆ. ಬಿಡ್ ಆದ ನಂತರ ಮಾಲಿಕತ್ವದ ದಾಖಲೆ ಬರುವವರೆಗೂ ಯಾವುದೆ ವ್ಯಕ್ತಿ ಯಾವುದೆ ರೀತಿಯ ಕಟ್ಟಡ ನಿರ್ಮಾಣ ಮಾಡಲು ಅವಕಾಶ ಇಲ್ಲ ಎಂದರೆ ಸರಿ. ನಮ್ಮ ಹೆಸರಿಗೆ ನಿಪಿ. 1 ರ ಮಾಲೀಕತ್ವದ ದಾಖಲೆ ಬರುವರೆಗೂ ನಾವುಗಳು ಕೂಡ ಯಾವುದೆ ರೀತಿಯ ಕಟ್ಟಡವನ್ನು ದಾವಾ ಸ್ವತ್ತಿನಲ್ಲಿ ನಿರ್ಮಿಸಿರಲಿಲ್ಲ ಎಂದರೆ ಒಂದು ಮಂಗಳೂರು ಹಂಚಿನ ಒಂದು ವಾಚಮೆನ್ ಷಡ್ ನಿರ್ಮಿಸಿದ್ದೇವು. ಸದರಿ ಷಡ್ ಅನ್ನು ಈ ಕೇಸ್ ಹಾಕುವ ಸುಮಾರು 10 ವರ್ಷಗಳ ಹಿಂದೆ ನಿರ್ಮಿಸಿದ್ದೇವು.

2010 ರ ನಂತರ ನಾವು ದಾವಾ ಸ್ವತ್ತುಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ಲೈಸನ್ಸ್ ಪಡೆದು ಕಟ್ಟಡ ಕಾಮಕಾರಿ ಮಾಡಿರುವುದಿಲ್ಲ. ನಾವು ಈ ವಿಚಾರವನ್ನೆ ನಮ್ಮ ದಾವಾದಲ್ಲಿ ಬರೆಸಿದ್ದೇವೆ. ಈ ದಾವಾದ ಪ್ರತಿವಾದಿಗಳ ತಂದೆ ಜ್ಞಾನದೇವ್ ನನಗೆ ಗೊತ್ತು, ಅವರ ತಾಯಿ ಕೂಡ ನನಗೆ ಗೊತ್ತು.ದಾವಾ ಸ್ವತ್ತಿನಲ್ಲಿ ಸದರಿ ಜ್ಞಾನದೇವ್ ರವರು ಒಂದು ಗೋಡೌನ್ ಕಟ್ಟಿದ್ದಾರೆ ಎಂದರೆ ಸರಿಯಲ್ಲ , ಅವರು ಕಟ್ಟಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ಒಂದು ಗೋಡೌನ್ ಇದೆ ಎಂದರೆ ಹೌದು ಅದು ನಾವೆ ಕಟ್ಟಿರುವುದು. ಸದರಿ ಗೋಡೌನ್ ನ ವಿಸ್ತೀರ್ಣ ಪೂರ್ವ-ಪಶ್ಚಿಮ 25 ರಿಂದ 30 ಅಡಿ, ಉತ್ತರ-ದಕ್ಷಿಣ 18-20 ಅಡಿ ಇರಬಹುದು. ಸದರಿ ಕಟ್ಟಡವನ್ನು ಜ್ಞಾನದೇವ್ ರವರು ಕಟ್ಟಿದ್ದಾರೆ ಎಂದರೆ ಸುಳ್ಳು, ನಾವು ಕಟ್ಟಿದ್ದೇವೆ

ಎನ್ನುತ್ತಾರೆ. ಅದನ್ನು ನಿರ್ಮಿಸಿ ಸುಮಾರು 20 ವರ್ಷ ಆಗಿರಬಹುದು. ಅದನ್ನು ಕಟ್ಟಲು ಯಾವುದೆ ಅನುಮತಿ ಪರವಾನಿಗೆ ಪಡೆದುಕೊಂಡಿಲ್ಲ ಅದನ್ನು ವಾಚಮೆನ್ ಷಡ್ ಎಂದು ಕಟ್ಟಿದ್ದೇವೆ. ನಾನು ಹೇಳಿದಂತೆ ನಾವು ವಾಚಮೆನ್ ಷಡ್ ಕಟ್ಟಿಲ್ಲ ಈಗ ಹೇಳಿದ ವಿಸ್ತೀರ್ಣದ ಯಾವುದೆ ಗೋಡೌನ್ ಕಟ್ಟಿಲ್ಲ ಸ್ವತ್ತಿನಲ್ಲಿ ಇರುವ ಗೋಡೌನ್ ಅನ್ನು ಜ್ಞಾನದೇವ್ ರವರು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಜ್ಞಾನದೇವ್ ರವರು ಹಾಲಿ ತೀರಿ ಹೋಗಿದ್ದಾರೆ ಎಂದರೆ ಸರಿ. ಅವರು ತಮ್ಮ ಹೆಂಡತಿ ಮಕ್ಕಳನ್ನು ವಾರಸುದಾರರಾಗಿ ಬಿಟ್ಟು ಪೌತಿ ಹೊಂದಿದ್ದಾರೆ ಎಂದರೆ ಸರಿ. ಈ ಕೇಸಿನ ಪ್ರತಿವಾದಿಯವರು ಜ್ಞಾನದೇವ್ ರವರ ಹೆಂಡತಿ ಮತ್ತು ಮಕ್ಕಳಗಳಾಗಿದ್ದಾರೆ ಎಂದರೆ ಸರಿ. ಜ್ಞಾನದೇವ್ ರವರ ಮರಣಾ ನಂತರ ಪ್ರತಿವಾದಿಯರು ದಾವಾ ಸ್ವತ್ತುಗಳ ಸ್ವಾಧೀನದಲ್ಲಿ ಮುಂದುವರೆದುಕೊಂಡು ಬಂದಿದ್ದಾರೆ ಎಂದರೆ ಹೌದು ಆದರೆ ಅವರು ಅದನ್ನು ನನ್ನಿಂದ ಬಾಡಿಗೆಗಾಗಿ ಪಡೆದುಕೊಂಡಿದ್ದರು ಎನ್ನುತ್ತಾರೆ. ಅವರು ನನ್ನಿಂದ ಬಾಡಿಗೆ ಪಡೆದುಕೊಂಡ ನಿಖರ ದಿನಾಂಕ ಹೇಳಲು ನನಗೆ ಸಾಧ್ಯವಿಲ್ಲ. ಇಂತಹ ಯಾವುದೆ ಬಾಡಿಗೆ ವ್ಯವಹಾರ ಆದಲ್ಲಿ ಈ ಬಗ್ಗೆ ಒಂದು ದಾಖಲೆ ಪತ್ರ ಮಾಡುತ್ತಾರೆ ಎಂದರೆ ಸರಿ, ಆದರೆ ಇಲ್ಲಿ ಆ ರೀತಿ ಮಾಡಿರುವುದಿಲ್ಲ ಬಾಯಿ ಮೂಲಕ ಮಾಡಿಕೊಂಡಿದ್ದೇವು. ಸದರಿ ಸ್ವತ್ತನ್ನು ತಿಂಗಳಿಗೆ ರೂ. 2000/- ಬಾಡಿಗೆ ಆಧಾರದಲ್ಲಿ ನೀಡಿದ್ದೇವು. ನಮಗೆ ಪ್ರತಿವಾದಿಗಳಿಂದ ಎಷ್ಟು ವರ್ಷದ ಬಾಡಿಗೆ ಹಣ ಬಾಕಿ ಇದೆ ಎಂಬ ಬಗ್ಗೆ ಆಗಲಿ ಅಥವಾ ಬಾಕಿ ಇರುವ ಒಟ್ಟು ಮೊತ್ತವಾಗಲಿ ವಾದ ಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸರಿ. ಎಂದು ನುಡಿದು ನಾವು ರಿಕವರಿ ಕೇಳುತ್ತಿಲ್ಲ ನಮಗೆ ಜಾಗ ಖಾಲಿ ಮಾಡಿ ಕೊಡಿ ಎಂದು ಮಾತ್ರ ಕೇಳುತ್ತಿದ್ದೇವೆ ಆದ್ದರಿಂದ ಕಾಣಿಸಿಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.